ಕೊಟ್ಟಿದ್ದೇತಿ. ಅವರು ಅದನ್ನ ವಾಪಾಸ್ ಕೊಟ್ಟಾರ. ಈಗದನ್ನ ನಿಮ್ಮ ಮುಂದಾ ಇಟ್ಟೇನಿ ನೋಡ್ರಿ...' ಹುಸೇನವ್ವ ನಡುಗೋ ಧ್ವನಿಯಲ್ಲಿ ಪತ್ರ ತೋರಿಸಿ ಹೇಳಿದಳು.

'ಸರಿ ಮುಗೀತಲ್ಲ, ನಿಮ್ ಕಂಪ್ಲೇಂಟಿಗೆ ಉತ್ರ ಸಿಗ್ತಲ್ಲ' ಎಸ್ಪಿ ಸಾಹೇಬರು ತಂಜೀಂ ಮುಖಂಡರತ್ತ ನೋಡಿ ಹೇಳಿದರು.

'ಆತು ಸಾಹೇಬ್ರ, ಆದ್ರೆ ಅದನ್ನ ಮಗನ ಹೆಸ್ರಿಗೆ ಮಾಡ್ಸೋಕೆ ನೀವೊಂದು ಮಾತು ಹೇಳ್ರಿ. ಶಫಿಗೆ ಈಗ ಬುದ್ಧಿ ಬಂದೇತಿ. ಹೊಲ ಮಾಡ್ಕೆಂಡು ಅವ್ವನ್ನ ನೋಡ್ಕೋತಾನಂತೆ' ತಂಜೀಂ ಮುಖಂಡರು ಮನವಿ ಮಾಡಿದರು.

'ಅದು ಮಾತ್ರ ಈ ಜನ್ಮದಾಗೆ ಸಾಧ್ಯವಿಲ್ಲ. ಬೇಕಾದ್ರೆ ದಾರ್‍ಯಾಗೆ ಹೋಗೋನಿಗೆ ಹೊಲನ ದಾನ ಬರದು ಕೊಡ್ತೇನಿ. ಈ ಹರಾಮ್‌ಕೋರನಿಗೆ ಕೊಡೋದಿಲ್ಲ' ಹುಸೇನವ್ವ ಖಂಡ ತುಂಡ ಮಾತಾಡಿದಳು.

'ಹಂಗೆಲ್ಲ ಹೇಳಬ್ಯಾಡ ಹುಸೇನವ್ವ, ನಿನ್ನ ಹೊಟ್ಯಾಗೆ ಹುಟ್ಟಿದವ ಛಲೋ ಇರಬ್ಯಾಕೋ ಬ್ಯಾಡೋ, ಅವನ ತಪ್ಪೆಲ್ಲ ಹೊಟ್ಯಾಗೆ ಹಾಕ್ಕೋ. ಹೊಲ ಮೇನ್ ರೋಡಿನಾಗೈತಿ, ಮಗ ಏನರೆ ದುಡಿಮಿ ಮಾಡ್ತಾನ...' ಮುಖಂಡರು ಮನವೊಲಿಸಲು ನೋಡಿದರು.

'ಅದೊಂದ್ ಬಿಟ್ಟು ಬ್ಯಾರೆ ಮಾತಾಡ್ರಿ...' ಹುಸೇನವ್ವ ಪಟ್ಟು ಹಿಡಿದಳು. ಎಷ್ಟು ಹೇಳಿದರೂ ಕೇಳದಿದ್ದಾಗ ತಂಜೀಂ ಮುಖಂಡರು ತಮ್ಮ ತಮ್ಮಲ್ಲೇ ಮಾತಾಡಿಕೊಂಡರು. 'ಆತು, ಒಂದ್ ಕೆಲ್ಸ ಮಾಡು ಹುಸೇನವ್ವ, ಹೊಲನ ನಮ್ಮ ತಂಜೀಂ ಕಮಿಟಿಗೆ ಬರೆದುಕೊಡು. ನೀ ಸಾಯೂಮಟ ಅಲ್ಲೇ ಇರುವಂತಿ. ಆಸ್ತಿ ಬೇರೇರೆ ಪಾಲಾಗೋದಕ್ಕಿಂತ ಸಮಾಜಕ್ಕೆ ಸೇರಲಿ' ಎಂದರು.

'ಅದೆಂಗಾಕ್ತತಿ? ಏನು ಮಾತಾಡ್ತೀರಿ ನೀವು? ನಾ ಒಪ್ಪೋದಿಲ್ಲ' ತಂಜೀಂ ಮುಖಂಡರ ಮ್ಯಾಲೇ ಶಫಿಗೆ ಸಿಟ್ಟು ಬಂತು.

ತಕ್ಷಣ ಹುಸೇನವ್ವ 'ನೀವು ಹೇಳಿದ್ದು ಕೇಳಾಕ ನಾ ಇಲ್ಲಿ ಬಂದಿಲ್ಲ. ನಿಮ್ ಕಮಿಟಿಗೆ ಯಾಕೆ ಹೊಲ ಬರೆದು ಕೊಡ್ಲಿ? ಹಂಗೇನರೆ ಕೊಡೋ ಕಾಲ ಬಂದ್ರೆ ನಮ್ಮೂರಾಗೆ ಸಾಲಿ ತೆಗಿಯಾಕೆ ಸರ್ಕಾರಕ್ಕೆ ಅದ್ನ ದಾನ ಬರೆದುಕೊಡ್ತೀನಿ. ಮಕ್ಕಳು ದಿನಾ ಮೂರು ಮೈಲಿ



ನಡಿಯೋದು ತಪ್ಪಿದಂಗಾಗ್ತೇತಿ...' ಎಂದಳು.

'ಸಾಲಿಗೆ ಜಾಗ ಕೊಡೋದು ಸರ್ಕಾರದ ಕೆಲ್ಸ. ನಿನ್ನ ಸ್ವಂತ ಹೊಲ ಯಾಕೆ ಕೊಡ್ತಿ? ಹೋಗ್ಲಿ ತಂಜೀಂ ಕಮಿಟಿಗೆ ಬ್ಯಾಡ ಅಂದ್ರೆ ಮಸೂತಿಗಾದ್ರು ಬರೆದುಕೊಡು, ದೇವರ ಸೇವಾ ಮಾಡಿದಂಗಾಗ್ತತಿ...' ತಂಜೀಂ ಮುಖಂಡರೂ ಪಟ್ಟು ಬಿಡಲಿಲ್ಲ.

'ಮಕ್ಕಳೂ ದೇವರ ಸಮ ಅದಾರ. ಅವಕ್ಕೆ ನಡಿಯೂ ಕಷ್ಟ ತಪ್ಪಿದ್ರೆ ದೇವರ ಸೇವಾ ಮಾಡಿದಂಗೇ...'

'ಸರಿ ಹೊಲನ ಸಾಲಿ ಕಟ್ಟಾಕೆ ಕೊಟ್ಟು ನೀ ಎಲ್ಲಿ ಬಾಳೇ ಮಾಡ್ತಿ?'

'ಆ ಚಿಂತಿ ನಿಮಗೆ ಬ್ಯಾಡ, ನಾ ಅದೇ ಸಾಲ್ಯಾಗೆ ಕಸ ಹೊಡ್ಕಂಡ್ ಇರ್ತೀನಿ...'

ಹುಸೇನವ್ವ ಹೇಳಿದ್ದು ಕೇಳಿ ಯಾರಿಗೂ ಮಾತೇ ಹೊರಡಲಿಲ್ಲ.

●